## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಪಾವತಿಯನ್ನು ಗಾಂಧಿ ಸಾಕ್ಷಿಕಾಯಕ ತಂತ್ರಾಂಶದಲ್ಲಿ ಅಳವಡಿಸದೇ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧದ ಶಿಸ್ತುಕ್ರಮ - ಅಂತಿಮ ಆದೇಶದ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 174 ವಿಸೇಬಿ 2014.ದಿ:29-09-2014.
2) ಅಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು

ಪ್ರಸ್ತಾವನೆ:-

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿ, ಆಡಳಿತಾತ್ಮಕ ಮಂಜೂರಾತಿ, ತಾಂತ್ರಿಕ ಮಂಜೂರಾತಿ, ಟೆಂಡರ್ ಪ್ರಕ್ರಿಯೆಯ ವಿವರಗಳು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಲ್ಲುಗಳ ಪಾವತಿ ವಿವರಗಳನ್ನು ಗಣಕೀಕರಣಗೊಳಿಸಲು ಸೂಚಿಸಲಾಗಿರುತ್ತದೆ. ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಬಳಕೆಯನ್ನು ದಿ:02-04-2013 ರಿಂದ ಕಡ್ಡಾಯಗೊಳಿಸಿದೆ. ಮತ್ತು ದಿನಾಂಕ:03-10-2013 ರಿಂದ ತಂತ್ರಾಂಶದ ಹೊರಗಡೆ ಬಿಲ್ಲು ಪಾವತಿಸುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ ಈ ಯೋಜನೆಯನ್ನು ಕೆಲವೊಂದು ಜಿಲ್ಲೆಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನಲೆಯಲ್ಲಿ ಸದರಿ ತಂತ್ರಾಂಶವನ್ನು ಅನುಷ್ಠಾನಗೊಳಿಸದೆ ಕರ್ತವ್ಯ ಲೋಪವೆಸಗಿದ ಅಧಿಕಾರಿಗಳಿಗೆ ದಿನಾಂಕ: 19-05-2014 ರ ಕಾರಣ ಕೇಳುವ ನೋಟೀಸು ಜಾರಿಗೊಳಿಸಿ ಈ ಬಗ್ಗೆ 3 ದಿನಗಳ ಒಳಗಾಗಿ ಸಮಜಾಯಿಷಿ ನೀಡಲು ಸೂಚಿಸಿದ್ದು, ಆದರೆ ಸದರಿ ಅಧಿಕಾರಿಗಳು 4 ತಿಂಗಳ ಅವಧಿ ಗತಿಸಿದರೂ ಸಹ ಉತ್ತರವನ್ನು ಸಲ್ಲಿಸದೆ ಕರ್ತವ್ಯ ನಿರ್ಲಕ್ಷತೆ ಎಸಗಿದ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 12(1)(ಎ)ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ:29-09-2014 ರಂದು ಕಾರಣ ಕೇಳುವ ನೋಟಿಸನೊಂದಿಗೆ ದೋಷಾರೋಪಣೆ ಪಟ್ಟಿಯನ್ನು ಜಾರಿ ಮಾಡಲಾಗಿತ್ತು. ಅಲ್ಲದೆ ಸದರಿ 15 ಜನರ ಪೈಕಿ ಶ್ರೀ ನರಸಿಂಗರಾವ್ ಮುತ್ತಾಲಿಕ್, ಶ್ರೀ ಸೂರ್ಯಕಾಂತ ಎ.ಬಿರಾದಾರ ಮತ್ತು ಶ್ರೀ ಜೆ.ಜೆ.ನಾಯ್ಕ ಇವರುಗಳನ್ನು ಹೊರತುಪಡಿಸಿ ಉಳಿದ ಅಧಿಕಾರಿಗಳನ್ನು ದಿನಾಂಕ: 15.10.2014ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

1. ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತ್, ದೇವನಹಳ್ಳಿ.
2. ಶ್ರೀ ಕೆ. ಅಶ್ವಥ್‌ರೆಡ್ಡಿ, ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತ್, ದೊಡ್ಡಬಳ್ಳಾಪುರ.
3. ಶ್ರೀ ಹೆಚ್.ಎಂ. ದ್ಯಾಮಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹೊಸಕೋಟೆ.
4. ಶ್ರೀ ಶಿವಾಜಿ ಧೋನೆ, ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತ್, ಬೀದರ್.
5. ಶ್ರೀ ನಿಂಗಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಚಿತ್ರದುರ್ಗ.
6. ಶ್ರೀ ಟಿ. ಪಾಂಡ್ಯಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತ್, ಚಳ್ಳಕೆರೆ.
7. ಶ್ರೀ ಪ್ರಭುಸ್ವಾಮಿ,ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರಿಯೂರು.

8. ಶ್ರೀ ಬಾಲಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹೊಳಲ್ಕೆರೆ.

9. ಶ್ರೀ ಈಶ್ವರ್ ಪ್ರಸಾದ್,ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತ್, ಹೊಸದುರ್ಗ.

10. ಶ್ರೀ ವೆಂಕಟೇಶ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ರಾಮನಗರ.

11. ಶ್ರೀ ಕೆ.ಬಿ. ಅಕ್ಕೊಜ್ಜಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ.

12. ಶ್ರೀ ಪ್ರಭಯ್ಯಸ್ವಾಮಿ ಕಾಶೀನಾಥಯ್ಯ ಹಿರೇಮಠ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸುರಪುರ.

13. ಶ್ರೀ ಸೂರ್ಯಕಾಂತ. ಎ. ಬಿರಾದಾರ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಾಲ್ಕಿ.

14. ಶ್ರೀ ನರಸಿಂಗರಾವ್ ಮುತ್ತಾಲಿಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಹಾಪೂರ್

15. ಶ್ರೀ ಜೆ.ಜೆ.ನಾಯಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕನಕಪುರ.

ಮೇಲೆ ಓದಲಾದ ಕ್ರಮಸಂಖ್ಯೆ:(2) ರಲ್ಲಿ ಮೇಲ್ಕಂಡ ಆಪಾದಿತ ಅಧಿಕಾರಿಗಳು ಲಿಖಿತ ಹೇಳಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ದಿನಾಂಕ:19-05-2014 ರಂದು ಹೊರಡಿಸಿರುವ ಕಾರಣ ಕೇಳುವ ನೋಟೀಸು ತಮಗೆ ತಲುಪಿರಲಿಲ್ಲವೆಂದು, ಹಾಗಾಗಿ ತಮಗೆ ಸಕಾಲದಲ್ಲಿ ವಿವರಣೆ ಸಲ್ಲಿಸಲು ಸಾಧ್ಯವಾಗಿಲ್ಲವೆಂದು, ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳ ಅನುಷ್ಠಾನ ಕುರಿತಂತೆ ಮಾಹಿತಿ ಹಾಗೂ ಪಾವತಿಸಲಾದ ಮೊತ್ತದ ವಿವರಗಳನ್ನು ಅಳವಡಿಸಿರುವುದಾಗಿ ತಿಳಿಸುತ್ತಾ, ತಮ್ಮ ಲಿಖಿತ ಹೇಳಿಕೆಗೆ ಪೂರಕವಾಗಿ ಕೆಲವು ದಾಖಲೆಗಳನ್ನೂ ಸಹ ಹಾಜರುಪಡಿಸಿರುತ್ತಾರೆ.

ಎಲ್ಲಾ ಆಪಾದಿತರುಗಳ ವಿರುದ್ಧದ ಆರೋಪವು ಒಂದೇ ಆಗಿದ್ದು, ಸದರಿಯವರುಗಳು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ ಅಳವಡಿಸಿಲ್ಲದಿರುವುದು ಹಾಗೂ ಈ ಕುರಿತು ಸರ್ಕಾರದ ದಿನಾಂಕ: 19.05.2014 ರಂದು ಜಾರಿ ಮಾಡಿದ ಕಾರಣ ಕೇಳುವ ನೋಟೀಸಿಗೆ ಲಿಖಿತ ಸಮಜಾಯಿಷಿ ಸಲ್ಲಿಸಿಲ್ಲವೆಂಬುದಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ಆಪಾದಿತರುಗಳು ತಮ್ಮ ವಿವರಣೆಯನ್ನು ಸಲ್ಲಿಸಿರುತ್ತಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರುಗಳ ಪೈಕಿ ಈ ಕೆಳಕಂಡ ಅಧಿಕಾರಿಗಳು ಸರ್ಕಾರವು ದಿನಾಂಕ: 19.05.2014 ರಂದು ಜಾರಿ ಮಾಡಿದ ಕಾರಣ ಕೇಳುವ ನೋಟೀಸಿಗೆ ತಾವು ಲಿಖಿತ ಹೇಳಿಕೆಯನ್ನು ಇ-ಮೇಲ್ ಮುಖಾಂತರ ಸಲ್ಲಿಸಿರುವುದಾಗಿಯೂ, ತಂತ್ರಾಂಶದ ಜ್ಞಾನ ಹೊಂದಿರುವ ಸಿಬ್ಬಂದಿ ಕೊರತೆಯ ಕಾರಣದಿಂದಾಗಿ ಸಕಾಲದಲ್ಲಿ ತಂತ್ರಾಂಶವನ್ನು ಅಳವಡಿಸುವಲ್ಲಿ ವಿಳಂಬವಾಗಿರುವುದೆಂದು ತಿಳಿಸಿ ತಮ್ಮ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಬೇಕೆಂದು ಕೋರಿದ್ದಾರೆ:-

1. ಶ್ರೀ ಹೆಚ್.ಎಂ.ದ್ಯಾಮಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹೊಸಕೋಟೆ.

2. ಶ್ರೀ ಕೆ.ಅಶ್ವಥ್ ರೆಡ್ಡಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ದೊಡ್ಡಬಳ್ಳಾಪುರ.

3. ಶ್ರೀ ಈಶ್ವರ ಪ್ರಸಾದ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ಹೊಸದುರ್ಗ.

4. ಶ್ರೀ ನಿಂಗಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ.

5. ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ದೇವನಹಳ್ಳಿ.

ಈ ಕೆಳಕಂಡ ಅಧಿಕಾರಿಗಳು ಸರ್ಕಾರವು ದಿನಾಂಕ: 19.05.2014ರಂದು ಹೊರಡಿಸಿರುವ ಕಾರಣ ಕೇಳುವ ನೋಟೀಸ್ ತಲುಪಿರುವುದಿಲ್ಲವೆಂದು ಹೀಗಾಗಿ ತಾವು ಸಕಾಲದಲ್ಲಿ ಉತ್ತರ ಸಲ್ಲಿಸಲು ಸಾಧ್ಯವಾಗಿಲ್ಲವೆಂದು, ಸರ್ಕಾರದ ಸೂಚನೆಯನುಸಾರ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಅಳವಡಿಸುವ ದಿಸೆಯಲ್ಲಿ ತಾವು ಕ್ರಮವಹಿಸಿರುವುದಾಗಿ ತಿಳಿಸಿ ತಮ್ಮ ವಿರುದ್ಧದ ಶಿಸ್ತಿನ ಕ್ರಮವನ್ನು ಕೈಬಿಡಬೇಕೆಂದು ಕೋರಿದ್ದಾರೆ.

1. ಶ್ರೀ ಬಾಲಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹೊಳಲ್ಕೆರೆ

2. ಶ್ರೀ ಶಿವಾಜಿ ಥೋನೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ಬೀದರ್.

ಶಿಸ್ತು ಕ್ರಮಕ್ಕೆ ಸಂಬಂಧಿಸಿದ ಎಲ್ಲಾ ಪತ್ರಗಳನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಲು ಕ.ನಾ.ಸೇ.(ವ.ನಿ.ಮೇ) ನಿಯಮಗಳಲ್ಲಿ ಕಡ್ಡಾಯ ಪಡಿಸಲಾಗಿದೆ. ಪ್ರಸ್ತುತ ಸರ್ಕಾರದ ಕಾರಣ ಕೇಳುವ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸದೇ ಸಾಮಾನ್ಯ ಅಂಚೆ ಮೂಲಕ ಕಳುಹಿಸಿರುವುದರಿಂದ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ್ದಕ್ಕೆ ಸ್ವೀಕೃತಿಯು ಇರುವುದಿಲ್ಲ. ಹೀಗಾಗಿ ಸದರಿಯವರ ವಿವರಣೆಯನ್ನು ಪರಿಗಣಿಸಲಾಗಿದೆ.

ಶ್ರೀ ಕೆ.ಬಿ.ಅಕ್ಕೋಜಿ, ಇವರು ತಮ್ಮ ವಿವರಣೆಯಲ್ಲಿ ತಾವು ದಿನಾಂಕ: 12.05.2015 ರಿಂದ 31.05.2015ರವರೆಗೆ ವೈದ್ಯಕೀಯ ಕಾರಣಗಳಿಂದಾಗಿ ಪರಿವರ್ತಿತ ರಜೆಯ ಮೇಲೆ ತೆರಳಿದ್ದು, ಆ ಸಂದರ್ಭದಲ್ಲಿ ಶ್ರೀ ರವಿ ಎಸ್.ಸೂರನ್, ಸ.ಕಾ.ಇಂ. ಇವರು ಮಾಗಡಿ ತಾ.ಪಂ.ನ ಕಾ.ನಿ.ಅ. ಹುದ್ದೆಯ ಪ್ರಭಾರದಲ್ಲಿದ್ದು, ಸರ್ಕಾರವು ದಿನಾಂಕ: 19.05.2014 ರಂದು ಹೊರಡಿಸಿದ ಕಾರಣ ಕೇಳುವ ನೋಟೀಸ್ ತಾವು ರಜೆಯ ಮೇಲೆ ಇದ್ದ ಕಾರಣ ತಮಗೆ ತಲುಪಿಲ್ಲವೆಂದು ಹೀಗಾಗಿ ಸದರಿ ಕಾರಣ ಕೇಳುವ ನೋಟೀಸಿಗೆ ವಿವರಣೆ ಸಲ್ಲಿಸಲು ಸಾಧ್ಯವಾಗಿಲ್ಲವೆಂದು ತಿಳಿಸಿ ತಮ್ಮ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಬೇಕೆಂದು ವಿನಂತಿಸಿದ್ದಾರೆ. ಸದರಿ ಅಧಿಕಾರಿಯು ರಜೆಯ ಮೇಲೆ ತೆರಳಿರುವುದರಿಂದ, ಅವರ ಲಿಖಿತ ಹೇಳಿಕೆಯನ್ನು ಪರಿಗಣಿಸಲಾಗಿದೆ.

ಪ್ರಸ್ತುತ ಪ್ರಕರಣದಲ್ಲಿ ಮೇಲೆ ತಿಳಿಸಿರುವ ಆಪಾದಿತರುಗಳ ವಿರುದ್ಧ ಕ.ನಾ.ಸೇ.(ವ.ನಿ.ಮೇ) ನಿಯಮಗಳು 1957ರ ನಿಯಮ 12(1)ರ ಅನುಸಾರ ಶಿಸ್ತು ಕ್ರಮವನ್ನು ಕೈಗೊಂಡಿರುವುದರಿಂದ ಮೇಲ್ಕಂಡ ಅಧಿಕಾರಿಯಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳು ಹಾಗೂ ಪೂರಕ ದಾಖಲೆಗಳನ್ನು ಪರಿಶೀಲಿಸಿ ಮೇಲೆ ತಿಳಿಸಿರುವ ಅಧಿಕಾರಿಗಳ ವಿವರಣೆಯು ಪರಿಗಣಿಸಲು ಅರ್ಹವಾಗಿರುವುದರಿಂದ ಸದರಿಯವರುಗಳ ವಿವರಣೆಯನ್ನು ಒಪ್ಪಿ ಅವರುಗಳನ್ನು ಆರೋಪಮುಕ್ತರನ್ನಾಗಿ ಮಾಡಲು ಮತ್ತು

ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿಗಳು ಸರ್ಕಾರವು ನೀಡಿದ ದಿನಾಂಕ: 19.05.2014ರ ಕಾರಣ ಕೇಳುವ ನೋಟೀಸಿಗೆ ವಿವರಣೆ ಸಲ್ಲಿಸಲು ಸಾಧ್ಯವಾಗಿಲ್ಲವೆಂದು ತಿಳಿಸಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಎಲ್ಲಾ ಕಾಮಗಾರಿಗಳಿಗೆ ಅನುಷ್ಠಾನಗೊಳಿಸಲು ತಾವು ಕ್ರಮ ವಹಿಸಿರುವುದಾಗಿ ತಿಳಿಸಿ ತಮ್ಮ ಮೇಲಿನ ಶಿಸ್ತು ಕ್ರಮವನ್ನು ಕೈಬಿಡಬೇಕೆಂದು ಕೋರಿದ್ದಾರೆ.

1. ಶ್ರೀ ಪ್ರಭುಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಹಿರಿಯೂರು

2. ಶ್ರೀ ಟಿ.ಪಾಂಡ್ಯಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಚಳ್ಳಕೆರೆ.

3. ಶ್ರೀ ನರಸಿಂಗರಾವ್ ಮುತಾಲಿಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಶಹಾಪುರ.

ಈ ಕೆಳಕಂಡ ಅಧಿಕಾರಿಗಳು ಸರ್ಕಾರದ ಕಾರಣ ಕೇಳುವ ನೋಟೀಸ್ ತಲುಪಿರುವ ಬಗ್ಗೆ ಅಥವಾ ತಲುಪದೇ ಇರುವ ಬಗ್ಗೆ ಯಾವುದೇ ಮಾಹಿತಿಯನ್ನು ತಮ್ಮ ವಿವರಣೆಯಲ್ಲಿ ನೀಡಿರುವುದಿಲ್ಲ. ಆದಾಗ್ಯೂ ತಾವು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಎಲ್ಲಾ ಕಾಮಗಾರಿಗಳಿಗೆ ಅಳವಡಿಸಿಕೊಂಡು ಬಿಲ್ಲುಗಳನ್ನು ಪಾವತಿಸಲು ಕ್ರಮ ವಹಿಸಿದ್ದು, ತಮ್ಮ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಬೇಕೆಂದು ಕೋರಿದ್ದಾರೆ.

1. ಶ್ರೀ ವೆಂಕಟೇಶ್, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ರಾಮನಗರ.
2. ಶ್ರೀ ಪ್ರಭಯ್ಯಸ್ವಾಮಿ ಕಾಶೀನಾಥಯ್ಯ ಹಿರೇಮಠ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಸುರಪುರ.
3. ಶ್ರೀ ಸೂರ್ಯಕಾಂತ ಎ.ಬಿರಾದಾರ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ.
4. ಶ್ರೀ ಜೆ.ಜೆ.ನಾಯಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಕನಕಪುರ

ಮೇಲ್ಕಂಡ ಅಧಿಕಾರಿಗಳು ಸರ್ಕಾರದ ಕಾರಣ ಕೇಳುವ ನೋಟೀಸ್ ತಲುಪಿದ್ದರೂ ಸಹ ಕೆಲಸದ ಒತ್ತಡ ಹಾಗೂ ಇತರೆ ಕಾರಣಗಳಿಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸಾಧ್ಯವಾಗದಿರುವ ಬಗ್ಗೆ ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಜಾರಿ ಮಾಡಲು ಕ್ರಮ ವಹಿಸಿರುವ ಬಗ್ಗೆ ತಿಳಿಸಿರುವುದನ್ನು ಪರಿಗಣಿಸಿ ಸದರಿಯವರುಗಳಿಗೆ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 174 ವಿಸೇಬಿ 2014, ದಿನಾಂಕ:04.02-2016.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಈ ಕೆಳಕಂಡ ಅಧಿಕಾರಿಗಳಿಗೆ ಕ್ರಮಾಂಕ ಗ್ರಾಅಪ 174 ವಿಸೇಬಿ 2014 ದಿನಾಂಕ:29-09-2014ರ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಿದೆ.

1. ಶ್ರೀ ಹೆಚ್.ಎಂ.ದ್ಯಾಮಪ್ಪ., ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹೊಸಕೋಟೆ.
2. ಶ್ರೀ ಕೆ.ಅಶ್ವಥ್ ರೆಡ್ಡಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ದೊಡ್ಡಬಳ್ಳಾಪುರ.
3. ಶ್ರೀ ಈಶ್ವರ ಪ್ರಸಾದ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ಹೊಸದುರ್ಗ.
4. ಶ್ರೀ ನಿಂಗಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್. ಚಿತ್ರದುರ್ಗ..
5. ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ದೇವನಹಳ್ಳಿ.
6. ಶ್ರೀ ಬಾಲಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್. ಹೊಳಲ್ಕೆರೆ
7. ಶ್ರೀ ಶಿವಾಜಿ ಧೋನೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ಬೀದರ್
8. ಶ್ರೀ ಕೆ.ಬಿ. ಅಕ್ಕೊಜ್ಜಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ

ಈ ಕೆಳಕಂಡ ಅಧಿಕಾರಿಗಳಿಗೆ ಕ್ರಮಾಂಕ ಗ್ರಾಅಪ 174 ವಿಸೇಬಿ 2014 ದಿನಾಂಕ:29-09-2014ರ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(ii)ರಡಿ "ವಾಗ್ದಂಡನೆ" ವಿಧಿಸಿ ಆದೇಶಿಸಿದೆ.

1. ಶ್ರೀ ಪ್ರಭು ಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ಹಿರಿಯೂರು
2. ಶ್ರೀ ಟಿ.ಪಾಂಡ್ಯಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಚಳ್ಳಕೆರೆ.
3. ಶ್ರೀ ನರಸಿಂಗರಾವ್ ಮುತಾಲಿಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್., ಶಹಾಪುರ.
4. ಶ್ರೀ ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್. ರಾಮನಗರ.
5. ಶ್ರೀ ಪ್ರಭಯ್ಯಸ್ವಾಮಿ ಕಾಶೀನಾಥಯ್ಯ ಹಿರೇಮಠ, ಹಿಂದಿನ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್. ಸುರಪುರ
6. ಶ್ರೀ ಸೂರ್ಯಕಾಂತ ಎ.ಬಿರಾದಾರ, ಹಿಂದಿನ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್. ಭಾಲ್ಕಿ.
7. ಶ್ರೀ ಜೆ.ಜೆ.ನಾಯ್ಕ, ಹಿಂದಿನ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್.ಕನಕಪುರ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

T. Manju 4.2.16
(ಟಿ.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)(ಸೇವೆಗಳು-ಬಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು (ಲೆಕ್ಕಪತ್ರ 1 &2) / (ಆಡಿಟ್), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ/ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ/ ಕೃಷಿ ಇಲಾಖೆ./
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ರಾಮನಗರ, ಯಾದಗಿರಿ, ದಾವಣಗೆರೆ, ಗುಲ್ಬರ್ಗಾ, ಬೀದರ್.
4. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ/ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ/ ಕೃಷಿ ಇಲಾಖೆ./
5. ಸಂಬಂಧಿಸಿದ ಅಧಿಕಾರಿಗಳಿಗೆ (ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಮುಖಾಂತರ)
6. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
7. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ಉಪ ಕಾರ್ಯದರ್ಶಿ / ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
8. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.